# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560 020. ದೂರವಾಣಿ : 080-23368615 / 23442271 / 74 ವಿಸ್ತರಣೆ: 266
ವೆಬ್‌ಸೈಟ್ : www.bdabangalore.org

ಸಂಖ್ಯೆ : ಬೆಂಅಪ್ರಾ / ಆಯುಕ್ತರು / ಇಓ / ಸಿ.ಎ. ನಿವೇಶನಗಳು / **245 / 2020-21** ದಿನಾಂಕ : **19.03.2021**

## ನಾಗರಿಕ ಸೌಲಭ್ಯ ನಿವೇಶನಗಳ (ಸಿ.ಎ.ಸೈಟುಗಳು) ಪ್ರಕಟಣೆ 2020–21

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಲಭ್ಯವಿರುವ ಕೆಳಕಂಡ ನಾಗರಿಕ ಸೌಲಭ್ಯ ನಿವೇಶನಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ನಾಗರಿಕ ಸೌಲಭ್ಯದ ನಿವೇಶನಗಳ ಹಂಚಿಕೆ) ನಿಯಮಗಳು **1989**ರ ಅನುಸಾರ ಹಂಚಿಕೆ ಮಾಡಲು ಅರ್ಹ ಸಂಸ್ಥೆಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.

| ಕ್ರ. ಸಂ. | ಬಡಾವಣೆ | ಸಿ.ಎ. ನಿವೇಶನ ಸಂಖ್ಯೆ | ವಿಸ್ತೀರ್ಣ ಚ.ಮೀ. ಗಳ·ಲ್ಲಿ | ಉದ್ದೇಶ | ಚ.ಮೀ. ಒಂದಕ್ಕೆ ದರ (ರೂ.ಗಳಲ್ಲಿ) | ನೋಂದಣಿ ಶುಲ್ಕ (ರೂ.ಗಳಲ್ಲಿ) | ಅರ್ಜಿ ಜೊತೆಗೆ ಪಾವತಿ ಮಾಡ ಬೇಕಾಗಿರುವ ಪ್ರಾರಂಭಿಕ ಠೇವಣಿ ಮೊತ್ತ(ರೂ.ಗಳಲ್ಲಿ) ಜಿಎಸ್‌ಟಿ ಹೊರತುಪಡಿಸಿ | 30 ವರ್ಷಗಳಿಗೆ ಪಾವತಿ ಮಾಡಬೇಕಾದ ಒಂದೇ ಕಂತಿನಲ್ಲಿ ಗುತ್ತಿಗೆ ಮೊತ್ತ(ರೂ.ಗಳಲ್ಲಿ) (ಜಿ.ಎಸ್.ಟಿ) ಸೇರಿದಂತೆ | ವಾರ್ಷಿಕ ಮೊತ್ತ (ರೂ.ಗಳಲ್ಲಿ) (ಜಿ.ಎಸ್.ಟಿ) ಸೇರಿದಂತೆ | ಹೆಚ್ಚುವರಿ ಗುತ್ತಿಗೆ ಮೊತ್ತ(10 ಚ.ಮೀಗೆ ವರ್ಷಕ್ಕೆ ರೂ.1) |
|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 |
| 1 | ಚಳ್ಳಘಟ್ಟ ಗ್ರಾಮ, ಎನ್‌ಪಿಕೆಎಲ್ | 5 | 1938.30 | ತಾಯಿ ಮತ್ತು ಮಗು ಆರೈಕೆ ಕೇಂದ್ರ | 28,500/- | 5,000/- | 17,15,396.00 | 17153955+ 30,87,712= 2,02,41,667.00 | 36,69,814.00 | 200.00 |
| 2 | ಸರ್ ಎಂ.ವಿ. ಲೇಔಟ್ 4ನೇ ಬ್ಲಾಕ್ | 3/ಬಿ | 10,701.16 | ಶಿಕ್ಷಣ | 40,900/- | 10,000/- | 1,07,97,470.00 | 10,79,74,704+ 1,94,35,447= 12,74,10,151.00 | 2,30,99,460.00 | 1100.00 |

**ಟಿಪ್ಪಣಿ:**

1) ಜಿಎಸ್‌ಟಿ ಕಾಯ್ದೆ, 2017ರ ಅನ್ವಯ ಹಂಚಿಕೆ ಪತ್ರ ನೀಡುವ ಸಮಯದಲ್ಲಿ ಗುತ್ತಿಗೆ ಮೊತ್ತದ ಮೇಲೆ ಜಿಎಸ್‌ಟಿ ಸೇರಿಸಲಾಗುವುದು.
2) ಪ್ರಾರಂಭಿಕ ಠೇವಣಿ ಮೊತ್ತದ ಬಗ್ಗೆ ಡಿ.ಡಿ.ಯನ್ನು ಆಯುಕ್ತರು, ಬಿಡಿಎ, ಬೆಂಗಳೂರು ಇವರ ಪರವಾಗಿ ಪಡೆದಿರಬೇಕು.

## ಷರತ್ತುಗಳು

1. ಹಂಚಿಕೆಗಳು:- ನಾಗರಿಕ ಸೌಲಭ್ಯ ನಿವೇಶನಗಳ ಹಂಚಿಕೆಯನ್ನು 1989ರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ನಾಗರಿಕ ಸೌಲಭ್ಯದ ನಿವೇಶನಗಳ ಹಂಚಿಕೆ) ನಿಯಮಗಳ ಅನುಸಾರ ಮಾಡಲಾಗುವುದು.

2. **ನೋಂದಣಿ**:-

ಎ) ನಾಗರಿಕ ಸೌಲಭ್ಯದ ನಿವೇಶನಕ್ಕೆ ಅರ್ಜಿ ಸಲ್ಲಿಸಲು ಅಪೇಕ್ಷೆ ಹೊಂದಿರುವ ಸಂಸ್ಥೆಗಳು ಕೆನರಾ ಬ್ಯಾಂಕ್, ಬಿಡಿಎ ಎಕ್ಸ್‌ಟೇನ್‌ಷನ್ ಕೌಂಟರ್‌ನಲ್ಲಿ ನಿಗದಿತ ನೋಂದಣಿ ಶುಲ್ಕ ಪಾವತಿ ಮಾಡಿ ಬಿಡಿಎನಲ್ಲಿ ನೋಂದಣಿ ಮಾಡಿಸಬೇಕು ದಿನಾಂಕ: 22.03.2021 ರಿಂದ ಕೆನರಾಬ್ಯಾಂಕ್, ಬಿಡಿಎ ಎಕ್ಸ್‌ಟೆನ್‌ಷನ್ ಕೌಂಟರ್‌ನಲ್ಲಿ ಸಿ.ಎ.ನಿವೇಶನಗಳ ಹಂಚಿಕೆಗೆ ಅರ್ಜಿ ಪಡೆಯಬಹುದಾಗಿದೆ. ಸಂಬಂಧಪಟ್ಟ ಸಿ.ಎ. ನಿವೇಶನಗಳ ಬಗ್ಗೆ ನೋಂದಣಿ ಶುಲ್ಕವನ್ನು ಕಾಲಂ 7ರಲ್ಲಿ ತಿಳಿಸಲಾಗಿದೆ.

ಬಿ) ಒಂದಕ್ಕಿಂತ ಹೆಚ್ಚು ನಿವೇಶನಕ್ಕೆ ಅರ್ಜಿ ಸಲ್ಲಿಸಲು ಯಾವುದೇ ಸಂಸ್ಥೆಯು ಬಯಸಿದಲ್ಲಿ ಪ್ರತಿ ನಿವೇಶನಕ್ಕೆ ಪ್ರತ್ಯೇಕವಾಗಿ ನೋಂದಣಿ ಮಾಡಬೇಕು.

ಸಿ) ಯಾವುದೇ ಸಂಸ್ಥೆಯು ನೋಂದಣಿ ಶುಲ್ಕವನ್ನು ಹಿಂತೆಗೆದುಕೊಳ್ಳಲು ಬಯಸಿದರೆ, ನೋಂದಣಿಯ ಪೂರ್ಣ ಹಣದಲ್ಲಿ ಸೇವಾ ವೆಚ್ಚಗಳ ಬಗೆಗೆ ನೋಂದಣಿ ಶುಲ್ಕದ 10% ಹಣವನ್ನು ಕಡಿತಗೊಳಿಸಿ ಸಂಬಂಧಪಟ್ಟ ಸಂಸ್ಥೆಗೆ ಪ್ರಾಧಿಕಾರವು ಮರುಪಾವತಿ ಮಾಡುವುದು.

ಡಿ) ಸಂಸ್ಥೆಯು ಒಮ್ಮೆ ನೋಂದಣಿ ಮಾಡಿ ಅದನ್ನು ಹಿಂತೆಗೆದುಕೊಳ್ಳದಿದ್ದರೆ ಸದರಿ ನೋಂದಣಿಯು ಮುಂದಿನ ಹಂಚಿಕೆಗೂ ಸಿಂಧುವಾಗಿರುತ್ತದೆ.

ಇ) ಸಂಸ್ಥೆಗೆ ನಾಗರಿಕ ಸೌಲಭ್ಯದ ನಿವೇಶನ ಹಂಚಿಕೆ ಆದ ಪಕ್ಷದಲ್ಲಿ ಅವರು ಪಾವತಿ ಮಾಡಿದ್ದ ನೋಂದಣಿ ಶುಲ್ಕವನ್ನು ಮರುಪಾವತಿ ಮಾಡುವುದಿಲ್ಲ ಅಥವಾ ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ.

**ಎಫ್) ನೋಂದಣಿ ಶುಲ್ಕವನ್ನು ನಗದಾಗಿ /ಡಿಡಿ ರೂಪದಲ್ಲಿ ಮಾತ್ರ ಸಂದಾಯ ಮಾಡಬೇಕು.**

3. **ಅರ್ಹತೆ**:-

ಎ) ಸದರಿ ನಿಯಮಗಳ ನಿಯಮ-5ರ ಅನ್ವಯ ನೋಂದಣಿ ಮಾಡಿಸಿರುವ ಸಂಸ್ಥೆಗೆ ಮಾತ್ರ ಪ್ರಾಧಿಕಾರವು ನಾಗರಿಕ ಸೌಲಭ್ಯದ ನಿವೇಶನವನ್ನು ಗುತ್ತಿಗೆ ಆಧಾರದ ಮೇಲೆ ಹಂಚಿಕೆ ಮಾಡುವುದು.

ಬಿ) ಸಂಸ್ಥೆ ಅಂದರೆ, 1960 ರ ಕರ್ನಾಟಕ ಸಂಸ್ಥೆಗಳ ನೋಂದಣಿ ಅಧಿನಿಯಮದ ಅನ್ವಯ ನೋಂದಣಿಯಾಗಿರುವ ಒಂದು ಸಂಸ್ಥೆ ಸೊಸೈಟಿ ಅಥವಾ ಸಂಘ ಅಥವಾ 1960ರ ಕರ್ನಾಟಕ ಸಹಕಾರಿ ಸಂಘಗಳ ಅಧಿನಿಯಮದ ಅನ್ವಯ ನೋಂದಣಿಯಾಗಿರುವ ಸಹಕಾರಿ ಸಂಘ ಅಥವಾ ಧರ್ಮಾರ್ಥ ಶೈಕ್ಷಣಿಕ ಅಥವಾ ಧಾರ್ಮಿಕ ಉದ್ದೇಶಕ್ಕಾಗಿ ಸಂಪೂರ್ಣವಾಗಿ ರಚನೆಯಾಗಿರುವ ಒಂದು ಟ್ರಸ್ಟ್ ಎಂದು ಅರ್ಥ.

4. **ಗುತ್ತಿಗೆ ಮೊಬಲಗು ಮತ್ತು ಸಂಸ್ಥೆಗೆ ನಿವೇಶನದ ಹಂಚಿಕೆ**:-

ಎ) ನಾಗರಿಕ ಸೌಲಭ್ಯದ ನಿವೇಶನವನ್ನು 30 ವರ್ಷಗಳಿಗೆ ಮೀರದಂತೆ ಗುತ್ತಿಗೆ ಆಧಾರದ ಮೇಲೆ ಹಂಚಿಕೆ ಮಾಡಲಾಗುವುದು.

ಬಿ) ಯಾವುದೇ ಪ್ರದೇಶದಲ್ಲಿ ಗುತ್ತಿಗೆ ಆಧಾರದ ಮೇಲೆ ಹಂಚಿಕೆ ಮಾಡಲಾಗುವ ನಿವೇಶನದ ಗುತ್ತಿಗೆ ಮೊಬಲಗನ್ನು ನಿವೇಶನದ ಸರಿಯಾದ ಅಳತೆಯ ಆಧಾರದ ಮೇಲೆ ಪ್ರಾಧಿಕಾರವು ನಿಗದಿಗೊಳಿಸುವುದು. ಸೂಚಿಸಿರುವ ನಿವೇಶನಗಳ ವಿಸ್ತೀರ್ಣವು ವ್ಯತ್ಯಾಸವಾಗುವುದಕ್ಕೆ ಒಳಪಟ್ಟಿರುತ್ತದೆ.

ಸಿ) ಗುತ್ತಿಗೆ ಮೊಬಲಗನ್ನು ಒಟ್ಟಿಗೆ ಪಾವತಿ ಮಾಡಬಹುದು ಅಥವಾ ಗುತ್ತಿಗೆಯ ಅವಧಿಯಲ್ಲಿ ವಾರ್ಷಿಕ ಕಂತುಗಳಲ್ಲಿ ಪಾವತಿ ಮಾಡಬಹುದು. ಗುತ್ತಿಗೆ ಮೊಬಲಗನ್ನು ಒಟ್ಟಿಗೆ ಪಾವತಿ ಮಾಡುವುದಾದರೆ ಗುತ್ತಿಗೆದಾರನು ಪ್ರತಿ ವರ್ಷಕ್ಕೆ 10 ಚದರ ಮೀಟರ್ ಒಂದಕ್ಕೆ ರೂ.1/- ರಂತೆ ಹೆಚ್ಚುವರಿ ಗುತ್ತಿಗೆ ಮೊಬಲಗನ್ನು ಸಹ ಪಾವತಿ ಮಾಡಬೇಕಾಗುವುದು.

ಡಿ) ಅರ್ಜಿ ಆಹ್ವಾನಿಸುವಾಗ ಪ್ರಕಟಿಸಿರುವ ನಿವೇಶನದ ಗುತ್ತಿಗೆ ಮೊಬಲಗನ್ನು ಪ್ರಾಧಿಕಾರ ಬದಲಾವಣೆ ಮಾಡಬಹುದಾಗಿರುತ್ತದೆ. ಸಂಸ್ಥೆಯು, ಬದಲಾವಣೆ ಮಾಡಿದ ದರಗಳಲ್ಲಿ ನಿವೇಶನ ಪಡೆಯಲು ಒಪ್ಪಬಹುದು ಅಥವಾ ಹಂಚಿಕೆಯನ್ನು ನಿರಾಕರಿಸಬಹುದಾಗಿರುತ್ತದೆ.

5. **ಅರ್ಜಿ**:-

ಎ) ಅರ್ಜಿ ನಮೂನೆಯ ಬೆಲೆ ರೂ.1000/- ಪಾವತಿ ಮಾಡಿ ನಿಗದಿತ ಅರ್ಜಿಯನ್ನು ಕೆನರಾ ಬ್ಯಾಂಕ್, ಬಿಡಿಎ ಎಕ್ಸ್‌ಟೆನ್‌ಷನ್ ಕೌಂಟರ್‌ನಲ್ಲಿ ಪಡೆದುಕೊಳ್ಳಬಹುದು.

ಬಿ) ನಾಗರಿಕ ಸೌಲಭ್ಯದ ನಿವೇಶನ ಹಂಚಿಕೆ ಪಡೆಯಲು ಬೆಂ.ಅ.ಪ್ರಾ., ದಲ್ಲಿ ನೋಂದಣಿ ಮಾಡಿಸಿರುವ ಸಂಸ್ಥೆಗಳು ಕಾಲಂ 8 ರಲ್ಲಿ ತಿಳಿಸಿರುವಂತೆ, ನಿಗದಿತ ಅರ್ಜಿ ನಮೂನೆ II ರ ಜೊತೆಗೆ ನಿವೇಶನಕ್ಕೆ ಪ್ರಕಟಿಸಿರುವ ಗುತ್ತಿಗೆ ಮೊಬಲಗಿನ ಶೇಕಡ 11 ರಷ್ಟು ಪ್ರಾರಂಭಿಕ ಠೇವಣಿಯನ್ನು ಸಲ್ಲಿಸಬೇಕು.

ಸಿ) ಅರ್ಜಿಯನ್ನು ದಿನಾಂಕ: 05.04.2021 ಮಧ್ಯಾಹ್ನ 3.30 ಗಂಟೆ ಅಥವಾ ಅದಕ್ಕಿಂತ ಮುಂಚಿತವಾಗಿ ವೈಯಕ್ತಿಕವಾಗಿ ಬಿಡಿಎಯಲ್ಲಿ ಇರುವ ಕೆನರಾ ಬ್ಯಾಂಕ್ ನಗದು ಕೌಂಟರಿನ ಮೂಲಕ ಬಿಡಿಎ ಆಯುಕ್ತರ ಕಛೇರಿಗೆ ತಲುಪುವಂತೆ ಖುದ್ದಾಗಿ ಸಲ್ಲಿಸಬಹುದು ಅಥವಾ ನೋಂದಣಿ ಅಂಚೆ ಮೂಲಕ ಕಳುಹಿಸಬಹುದು. ನಿಗದಿಪಡಿಸಿದ ದಿನಾಂಕ ಮತ್ತು ಸಮಯದ ನಂತರ ಬರುವ ಮತ್ತು ದೋಷಯುಕ್ತವಾದ ಮತ್ತು ಸರಿಯಾಗಿಲ್ಲದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಡಿ) ಅರ್ಜಿದಾರರು ಅರ್ಜಿಯ ಜೊತೆಗೆ ಕಳೆದ ಐದು ವರ್ಷಗಳ ವಾರ್ಷಿಕ ಮತ್ತು ಲೆಕ್ಕಪರಿಶೋಧಕರ ವರದಿ ಹಾಗೂ ಹಂಚಿಕೆ ಇತ್ಯಾದಿ ಪಡೆಯಲು ಸಂಸ್ಥೆ / ಟ್ರಸ್ಟ್ ಹೊರಡಿಸಿರುವ ನಿರ್ಣಯವನ್ನು ಲಗತ್ತಿಸಿ ಸಲ್ಲಿಸಬೇಕು.

6. **ಹಂಚಿಕೆ ಬಗೆಗಿನ ಷರತ್ತುಗಳು**:-

ಎ) ನಾಗರಿಕ ಸೌಲಭ್ಯದ ನಿವೇಶನ ಹಂಚಿಕೆಯ ಬಗೆಗಿನ ಷರತ್ತುಗಳನ್ನು ಅರ್ಜಿ ನಮೂನೆಯ ಜೊತೆಯಲ್ಲಿ ಕೊಡಲಾಗುವುದು.

ಬಿ) ಯಾವುದೇ ನಿರ್ದಿಷ್ಟವಾದ ಸಿ.ಎ. ನಿವೇಶನದ ಹಂಚಿಕೆ ಪಡೆಯಲು ಸಾರ್ವಜನಿಕರಿಂದ ಸಾಕಷ್ಟು ಕೋರಿಕೆ ಬರದಿದ್ದ ಪಕ್ಷದಲ್ಲಿ ಪ್ರಾಧಿಕಾರವು ಸಮಗ್ರ ಅಭಿವೃದ್ಧಿ ಯೋಜನೆಯ ಅನುಸಾರವಾಗಿ ಅಂತಹ ಸಿ.ಎ. ನಿವೇಶನಗಳ ಉದ್ದೇಶವನ್ನು ಬದಲಾವಣೆ ಮಾಡಿ ಅವುಗಳ ಹಂಚಿಕೆಗಾಗಿ ಮರು ಪ್ರಕಟಣೆ ಮಾಡಬಹುದಾಗಿರುತ್ತದೆ.

ಸಿ) ಹಂಚಿಕೆಯ ಸಂಬಂಧ ಪ್ರಾಧಿಕಾರದ ತೀರ್ಮಾನವೇ ಅಂತಿಮವಾಗಿರುತ್ತದೆ. ಯಾವುದೇ ನಿವೇಶನಕ್ಕಾಗಿ ಸಲ್ಲಿಸಲಾಗಿರುವ ಯಾವುದೇ ಅಥವಾ ಎಲ್ಲಾ ಅರ್ಜಿಗಳನ್ನು ತಿರಸ್ಕರಿಸುವ ಹಕ್ಕನ್ನು ಪ್ರಾಧಿಕಾರವು ಕಾದಿರಿಸಿಕೊಂಡಿದೆ.

7. ಅರ್ಜಿದಾರರು ತಾವು ಸಲ್ಲಿಸುವ ಅರ್ಜಿಯ ಜೊತೆಗೆ ಸಿ.ಐ.ಟಿ.ಬಿ./ಬಿ.ಡಿ.ಎ. ಯಿಂದ ಅವರಿಗೆ ಈ ಹಿಂದೆ ಹಂಚಿಕೆ ಮಾಡಲಾಗಿದ್ದ ಸಿ.ಎ. ನಿವೇಶನದ ವಿವರಗಳನ್ನು ಸಲ್ಲಿಸಬೇಕು.

8. **ಸಿ.ಎ. ನಿವೇಶನಗಳ ಹಂಚಿಕೆಯ ಪ್ರಸ್ತಾಪಿತ ಉದ್ದೇಶದ ಬಗ್ಗೆ ಅಥವಾ ಇತರೆ ಉದ್ದೇಶದ ಬಗ್ಗೆ ಯಾವುದೇ ಆಕ್ಷೇಪಣೆಗಳನ್ನು ಹೊಂದಿದ್ದರೆ ಅಂತಹವರು ಆ ಬಗ್ಗೆ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 7 ದಿನಗಳ ಒಳಗಾಗಿ ಆಯುಕ್ತರು, ಬೆಂಅಪ್ರಾ., ಇವರಿಗೆ ತಿಳಿಸತಕ್ಕದ್ದು, ಇಂತಹ ಆಕ್ಷೇಪಣೆಗಳ ಬಗ್ಗೆ ಪ್ರಾಧಿಕಾರದ ತೀರ್ಮಾನವು ಅಂತಿಮವಾಗಿರುತ್ತದೆ.**

**ಸಹಿ/- ಆಯುಕ್ತರು, ಬೆಂಅಪ್ರಾ, ಬೆಂಗಳೂರು**

**ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 05.04.2021**

**ಬಿಡಿಎ ಮುಂದಾಳತ್ವದಲ್ಲಿ ಬೆಂಗಳೂರು ಅಭಿವೃದ್ಧಿ ಪಥದಲ್ಲಿ**